ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ನಿಜ.

ಆ) ನಿಜ.

ಇ) ಉಲ್ಲೇಖಿತ ಅಧಿಕಾರಿಗಳ ಹೆಸರುಗಳನ್ನು ಮುಂಬಡ್ತಿಯ ಪಟ್ಟಿಯಿಂದ ಕೈಬಿಟ್ಟಿರುವುದಿಲ್ಲ. ಆದ್ದರಿಂದ, ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ರಾಜ್ಯ ಪತ್ರಾಂಕಿತ ಮುಖ್ಯೋಪಾಧ್ಯಾಯರುಗಳಿಗೆ ವಿದ್ಯಾಧಿಕಾರಿಗಳಾಗಿ ಬಡ್ತಿ ಕೊಡುವಂಥ ಒಂದು ಪಟ್ಟಿಯನ್ನು ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳಿಗೆ ಕಳುಹಿಸುವಾಗ ಅದರಲ್ಲಿ ನಮೂದಿಸಲಾದ ಕೆಲವು ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರ ಹೆಸರನ್ನು ಕೈಬಿಟ್ಟಿರುವ ಬಗ್ಗೆ ತಮಗೂ ಕೂಡ ಪತ್ರ ಬರೆದಿದ್ದೆನು. ಆ ಪಟ್ಟಿ ಕಳುಹಿಸುವಾಗ ಇವರ ಹೆಸರು ಸೇರಿಸ್ಕೊ ಇಲ್ಲವೋ, ಆಮೇಲೆ ಸೇರಿಸಿದ್ದರೆ ಸೀನಿಯಾರಿಟಿ ಧಕ್ಕೆಯಾಗದಂತೆ ಅವರಿಗೆ ಪ್ರಮೋಷನ್ ಕೊಡುತ್ತೀರಾ ?

ಶ್ರೀ ಎಂ. ರಘುಪತಿ.— ಕಾನೂನು ಪ್ರಕಾರ ಯಾರಿಗೂ ಅನ್ಯಾಯವಾಗದಂತೆ ಕ್ರಮ ತೆಗೆದುಕೊಳ್ಳುತ್ತೇನೆ.

ಮಂಡಲ ಪಂಚಾಯತ್ ರಚನೆಗೆ ನಿಧಿಸಲಾದ ಜನ ಸಂಖ್ಯೆಯ ಮಿತಿ.

೪೬. ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಪುರಸಭೆಯನ್ನು ಮಂಡಲ್ ಪಂಚಾಯತ್ ಆಗಿ ಪರಿವರ್ತಿಸುವ ಬಗ್ಗೆ ಸರ್ಕಾರದವರ ಉದ್ದೇಶವಿದೆಯೇ ?

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಇ) ಮಂಡಲ ಪಂಚಾಯತ್ ರಚನೆಗೆ ವಿಧಿಸಲಾದ ಜನಸಂಖ್ಯೆಯ ಮಿತಿಯನ್ನೇ ಪುರಸಭೆಯನ್ನು ಮಂಡಲ ಪಂಚಾಯತ್ ಆಗಿ ಪರಿವರ್ತಿಸಲು ಅನ್ವಯಿಸಲಾಗುವುದೇ ?

ಈ) ಹಾಗಿಲ್ಲದಿದ್ದರೆ ಅದಕ್ಕೆ ಕಾರಣಗಳೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಇಲ್ಲ.

ಆ) ಸರ್ಕಾರ ಹತ್ತು ಸಾವಿರ ಮತ್ತು ಅದಕ್ಕಿಂತಲೂ ಕಡಿಮೆ ಜನಸಂಖ್ಯೆಯುಳ್ಳ ಪುರಸಭೆಗಳನ್ನು ಮಾತ್ರ ಮಂಡಲಗಳನ್ನಾಗಿ ಪರಿವರ್ತಿಸಿರುವುದರಿಂದ ಬೈಂದೂರು ಪುರಸಭೆಯನ್ನು ಮಂಡಲವನ್ನಾಗಿ ಮಾಡಿಲ್ಲ.

ಇ) ಇಲ್ಲ.

ಈ) ಕಾರಣಗಳು (ಆ)ನಲ್ಲಿ ಉತ್ತರಿಸಲಾಗಿದೆ.

ಶ್ರೀ ಬಿ. ಎಂ. ಇದಿನಬ್ಬ ಶ್ರೀ ಜಿ. ಎನ್. ಆಚಾರ್ ಪರವಾಗಿ.—(ಮಾನ್ಯ ಅಧ್ಯಕ್ಷರೇ, ಹೊಸದಾಗಿ ಮಂಡಲ ಪಂಚಾಯ್ತಿಗಳಿಗೆ ಕ್ಷೇತ್ರ ವಿಂಗಡಣೆ ಮಾಡಬೇಕಾದರೆ ೮ ರಿಂದ ೧೨ ಸಾವಿರದವರಿಗೆ ಜನಸಂಖ್ಯೆಯನ್ನು ಮಾನದಂಡವನ್ನಾಗಿ ತೆಗೆದುಕೊಂಡಿದೆ. ಬೈಂದೂರು ಮುನಿಸಿಪಾಲಿಟಿಯಲ್ಲಿ ಹತ್ತು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿದೆಯೆಂದೂ, ಅದನ್ನು ಮಂಡಲ್ ಪಂಚಾಯ್ತಿಯನ್ನಾಗಿ ಮಾಡಂವುದಕ್ಕೆ ಆಗುವುದಿಲ್ಲವೆಂದೂ ತಿಳಿಸಿರುವುದು ಆಶ್ಚರ್ಯವಾಗಿದೆ. ಬೈಂದೂರು ಮುನಿಸಿಪಾಲಿಟಿ ವಿರಿಯಾದಲ್ಲಿ ಪರಿಶಿಷ್ಟ ಜನಾಂಗದವರು, ಪರಿಶಿಷ್ಟ ವರ್ಗದವರು ಹೆಚ್ಚಿಗೆ ಇರುವುದರಿಂದ, ಮತ್ತು ಅವರ ಅಭಿವೃದ್ಧಿಯ ದೃಷ್ಟಿಯಿಂದ ಬೈಂದೂರು ಮುನಿಸಿಪಾಲಿಟಿಯನ್ನು ಮಂಡಲ್ ಪಂಚಾಯ್ತಿಯನ್ನಾಗಿ ಮಾಡುತ್ತೀರಾ ?

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೇ, ಮಂಡಲ್ ಪಂಚಾಯ್ತಿಯ ಕ್ಷೇತ್ರಗಳಿಗೆ ೮ ರಿಂದ ೧೨ ಸಾವಿರದ ವರೆಗೆ ಜನಸಂಖ್ಯೆಯನ್ನು ಗೊತ್ತು ಮಾಡಿದ್ದರೂ ಕೂಡ, ಸರ್ಕಾರದ ನೀತಿಯ ಪ್ರಕಾರ ೧೦,೦೦೦ ಸರಾಸರಿ ಇರಬೇಕೆಂದು ನಿರ್ಧಾರ ತೆಗೆದುಕೊಂಡಿದೆ ಆದಕ್ಕನುಗುಣವಾಗಿ ಬೈಂದೂರು ಮುನಿಸಿಪಾಲಿಟಿಯ ಜನಸಂಖ್ಯೆ ಹತ್ತು ಸಾವಿರಕ್ಕಿಂತ ಮೀರಿರುವುದರಿಂದ ಅದನ್ನು ಮಂಡಲ್ ಪಂಚಾಯ್ತಿಯನ್ನಾಗಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಪರಿಶಿಷ್ಟ ಜನಾಂಗದವರಿಗೆ, ಪರಿಶಿಷ್ಟ ವರ್ಗದವರಿಗೆ ತುಂಬಾ ಸಹಾಯವಾಗುವುದರಿಂದ, ಹತ್ತು ಸಾವಿರದ ಮಂದಿನ್ನೂರು ಜನಸಂಖ್ಯೆ ಇದ್ದರೂ ಮಂಡಲ್ ಪಂಚಾಯ್ತಿಯನ್ನಾಗಿ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಆರ್. ಯಾವಗಲ್.—ತಾಂತ್ರಿಕವಾಗಿ ಮಂಡಲ್ ಪಂಚಾಯ್ತಿಯನ್ನಾಗಿ ಮಾಡುವುದಕ್ಕೆ ಆಗುವುದಿಲ್ಲ.

ಟಿ.ಸಿ.ಹೆಚ್. ಕೋರ್ಸ್‌ಗೆ ಸಂಬಂಧಿಸಿದಂತೆ ಹೊರಡಿಸಲಾದ ಸರಕಾರದವರ ಆಜ್ಞೆಯಿಂದ ನಿರುದ್ಯೋಗಿಗಳಿಗೆ ತೊಂದರೆಯುಂಟಾಗಿರುವುದು-

೫೪೨(ಸಿ) ಶ್ರೀ ಜ್ಞಾನದೇವ ದೊಡ್ಡಮೇಟಿಯವರು(ರೋಣ).—ಮಾನ್ಯ ಶಿಕ್ಷಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಐದು ತಿಂಗಳ ಇಂಟರ್ನ್‌ಶಿಪ್ ಕೋರ್ಸನ್ನು ಮೊದಲು ೧೯೭೭ ರಿಂದ ಟಿ. ಸಿ. ಹೆಚ್.ಗೆ ಸಮವೆಂದು ಪರಿಗಣಿಸಿದ್ದು ನಿಜವೆ?

ಆ) ಇತ್ತೀಚೆಗೆ ಸರಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಐದು ತಿಂಗಳ ಇಂಟರ್ನ್‌ಶಿಪ್ ಕೋರ್ಸನ್ನು ಅಮಾನ್ಯ ಮಾಡಿ ಹನ್ನೆರಡು ತಿಂಗಳ ತರಬೇತಿ ಪಡೆಯಬೇಕೆಂದು ಆಜ್ಞೆ ಹೊರಡಿಸಿದ್ದು ನಿಜವೆ ?

ಇ) ಪೂರ್ವಾನ್ವಯವಾಗಿ (ರೆಟ್ರಾಸ್ಪೆಕ್ಟಿವ್‌ಲಿ) ಈ ಕಾನೂನನ್ನು ಜಾರಿಗೆ ತರುವುದರಿಂದ ಬಡ ನಿರುದ್ಯೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ಆಜ್ಞೆಯನ್ನು ೧೯೮೫-೮೬ರಿಂದ ಅಜ್ಞೆ ಜಾರಿಗೊಳಿಸಲು ಹೊರಡಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಸಚಿವರು).—

ಅ) ಪದವಿ ಪೂರ್ವ ಶಿಕ್ಷಣದ ದ್ವಿತೀಯ ಪರೀಕ್ಷೆಯಲ್ಲಿ ಎಜುಕೇಷನ್ ೧ ಮತ್ತು ೨ ಪಾಸು ಮಾಡಿ ಮತ್ತು ಐದು ತಿಂಗಳ ಇಂಟರ್ನ್‌ಶಿಪ್ ಕೋರ್ಸನ್ನು ಟಿ. ಸಿ. ಹೆಚ್.ಗೆ ಸಮವೆಂದು ಪರಿಗಣಿಸಿತ್ತು.

ಆ) ನಿಜ.

ಇ) ಪೂರ್ವಾನ್ವಯ ಜಾರಿಗೊಳಿಸುವುದರಿಂದ ತೊಂದರೆ ಆಗುವುದೆಂದು ವಿದ್ಯಾರ್ಥಿಗಳಿಂದ, ಕೆಲವು ಸಾರ್ವಜನಿಕರಿಂದ ಮಂಖಂಡರುಗಳಿಂದ ಅಲ್ಲದೆ ಉಪಾಧ್ಯಾಯರ ಸಂಘಗಳಿಂದ ನಿವೇದನೆಗಳು ಬಂದಿವೆ.

ಈ) ಇದನ್ನು ೧೯೮೬-೮೭ನೇ ಸಾಲಿನಿಂದ ಅನ್ವಯವಾಗುವಂತೆ ಆದೇಶವನ್ನು ದಿನಾಂಕ ೩-೨-೮೬ರಂದು ಹೊರಡಿಸಲಾಗಿದೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಸ್ವಾಮಿ, ೫ ತಿಂಗಳ ಇಂಟರ್ನಶಿಪ್ ಕೋರ್ಸನ್ನು ಪಡೆದ ಅಭ್ಯರ್ಥಿಗಳು ಉಪಾಧ್ಯಾಯರ ವೃತ್ತಿಗೆ ಅರ್ಜಿ ಹಾಕಲು ಅರ್ಹರಾಗಿರುತ್ತಾರೆಯೇ ?

ಶ್ರೀ ಎಂ. ರಘುಪತಿ.—ಈಗಾಗಲೇ ಇಂಟರ್ನಶಿಪ್ ಕೋರ್ಸ ಮುಗಿಸಿದವರಿಗೆ ಯಾವ ತೊಂದರೆಯೂ ಆಗುವುದಿಲ್ಲ. ಇನ್ನು ಮುಂದಕ್ಕೆ ೮೬-೮೭ನೇ ಸಾಲಿನಿಂದ ಅನ್ವಯವಾಗುವಂತೆ ಒಂದು ವರ್ಷ ತರಬೇತಿ ಪಡೆಯಬೇಕೆಂದು ಸರ್ಕಾರ ಕಡ್ಡಾಯ ಮಾಡಿದೆ.